**ಅಸಲು ದಾವಾ. ನಂಃ 171/2024**
**ಪಿಡಬ್ಲೂ - 1 ನಿರ್ಮಲಾ ಮಾದರ**

**ಸಾಕ್ಷಿಯನ್ನು ದಿನಾಂಕಃ 02.03.2026 ರಂದು ಕರೆಯಿಸಿ,ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲುಃ ಪ್ರತಿವಾದಿ ನಂ. 2 ರಿಂದ 5 ಪರ ಶ್ರೀ ಎಸ್.ಎನ್.ಟಿ. ವಕೀಲರಿಂದಃ**

1. ನಾನು 9ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮಣ್ಣೇರಿಯಲ್ಲಿ ವಾಸವಾಗಿರುತ್ತೇನೆ. ನನ್ನ ಮದುವೆಯಾದ ದಿನಾಂಕ, ತಿಂಗಳು ವರ್ಷ ನೆನಪಿಲ್ಲ. ನನಗೆ ಮದುವೆಯಾಗಿ 19 ವರ್ಷಗಳಾಗಿವೆ. ನನ್ನ ಜನ್ಮ ದಿನಾಂಕ ನೆನಪಿಲ್ಲ. ನನ್ನ ತವರುಮನೆಯ ಮನೆತನದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ದಾವಾಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಗೆ ನಾನು ನನ್ನ ಅಕ್ಕ ಮಾಹಿತಿ ಕೊಟ್ಟಿರುತ್ತೇವೆ. ನನ್ನ ವಾದ ಪತ್ರ ಇಂಗ್ಲೀಷನಲ್ಲಿ ಇರುತ್ತದೆ ಅದರಲ್ಲಿ ಏನೂ ಬರೆದಿದೆ ಎಂದು ಗೊತ್ತಿಲ್ಲ.

2. ನನ್ನ ತಂದೆಯ ಹೆಸರು ಕನಕಪ್ಪ ಕೆಂಚಪ್ಪ ಮಾದರ ಎಂದು ಇರುತ್ತದೆ. ದಾವಾ ಆಸ್ತಿ ಜಮೀನು ಇರುತ್ತದೆ ಸರ್ವೇ ನಂಬರ 3/2 ಇರುತ್ತದೆ. ಸದರಿ ಆಸ್ತಿಯು ಚಿಲಜಾರಿ ಗ್ರಾಮದಲ್ಲಿ ಇರುತ್ತದೆ. ಸದರಿ ಆಸ್ತಿಯ ಚಕ್ಕುಬಂದಿಃ ಪೂರ್ವಕ್ಕೆಃ ಕರಿಯಪ್ಪ ಮಾದರವರ ಜಮೀನು, ಪಶ್ಚಿಮಕ್ಕೆಃ ಘೋರ್ಪಡೆಯವರ ಜಮೀನು, ಉತ್ತರಕ್ಕೆಃ ಬಸಪ್ಪ ಕೊಟಗಿಯವರ ಜಮೀನು ಮತ್ತು ದಕ್ಷಿಣಕೆಃ ದೇವೇಂದ್ರಪ್ಪ ಕಮತಾರವರ ಜಮೀನು ಇರುತ್ತದೆ. ಸದರಿ ದಾವಾ ಆಸ್ತಿಯ ವಿಸ್ತೀರ್ಣ 4 ಎಕರೆ 5 ಗುಂಟೆ ಇರುತ್ತದೆ. ಸದರಿ ದಾವಾ ಆಸ್ತಿಯು ನಮ್ಮ ಅಜ್ಜನಿಗೆ ಸರ್ಕಾರದಿಂದ ಕೊಟ್ಟಂತಹ ಆಸ್ತಿಯಾಗಿರುತ್ತದೆ.

3. ನನ್ನ ಅಜ್ಜನ ಹೆಸರು ಕೆಂಚಪ್ಪ. ದಾವಾ ಆಸ್ತಿಅಲ್ಲದೇ ಊರಿನಲ್ಲಿ ಮನೆ ಇರುತ್ತದೆ. ಮನೆ ನಂಬರ ಗೊತ್ತಿಲ್ಲ. ನಾನು ಉದ್ದೇಶಪೂರ್ವಕವಾಗಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಸದರಿ ಮನೆಗಳು ಸಹ ಸರ್ಕಾರದಿಂದ ಕೊಟ್ಟ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಮನೆಯನ್ನು ಈ ದಾವೆಯಲ್ಲಿ ಸೇರಿಸದೇ ಇದ್ದ ಕಾರಣ ದಾವೆಯು ಊರ್ಜಿತವಲ್ಲ ಎಂದರೆ ಸಾಕ್ಷಿಯು ನನ್ನ ತಮ್ಮನಿಗೆ ಇರಲಿ ಎಂದು ಬಿಟ್ಟಿದ್ದೇನೆ ಎಂದು ನುಡಿಯುತ್ತಾರೆ.

<u>ಅಸಲು ದಾವಾ. ನಂಃ 171/2024</u>

**ಪಿಡಬ್ಲ್ಯೂ - 1 ನಿರ್ಮಲಾ ಮಾದರ**

4. ನನ್ನ ಅಜ್ಜ ಕೆಂಚಪ್ಪ ತಂದೆ ಕೆಂಚಪ್ಪ ಮಾದರವರಿಗೆ ನನ್ನ ತಂದೆ ಒಬ್ಬನೇ ಮಗ ಕನಕಪ್ಪ ಇರುತ್ತಾರೆ. ನಾನು ದಾವೆಯಲ್ಲಿ ತೋರಿಸಿರುವ ವಂಶಾವಳಿ ಸರಿ ಇರುತ್ತದೆ. ನನ್ನ ತಾಯಿ ಯಲ್ಲವ್ವ ಮನೆ ಕೆಲಸ ಮಾಡುತ್ತಾರೆ. ನನ್ನ ತಾಯಿ ಅವಶ್ಯಕ ಪಕ್ಷಗಾರರಾಗಿದ್ದು ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ತೋರಿಸಿಲ್ಲ ಎಂದರೆ ಸರಿಯಲ್ಲ. ನಮ್ಮದು ತುಂಬಾ ಬಡತನದ ಕುಟುಂಬ ಎಂದರೆ ಸರಿ. ನನ್ನ ತಂದೆಯು ಮನೆತನದ ಖರ್ಚು ಸಂಬಂಧ ಸಾಕಷ್ಟು ಖರ್ಚು ಮಾಡಿದ್ದರು ಎಂದರೆ ಸರಿಯಲ್ಲ. ಯಮನೂರಪ್ಪ ಕರಿಯಪ್ಪ ಮುದಗಲ್ ರವರಿಗೆ ಮಾರಾಟ ಮಾಡಲು ಒಪ್ಪಿ ಕರಾರು ಪತ್ರ ಮಾಡಿಕೊಂಡಿದ್ದರು ಎಂದರೆ ಸುಳ್ಳು. ಅದು ದಿನಾಂಕಃ 17-11-2004 ರಂದು ಆಗಿತ್ತು ಎಂದರೆ ಸರಿಯಲ್ಲ. ಸದರಿ ಸಂಚಗಾರ ಪತ್ರ ರೂ. 1,17,500/- ಗಳಿಗೆ ಆಗಿ ಸಾಕ್ಷಿದಾರರ ಸಮಕ್ಷಮ ರೂ. 50,000/- ಗಳನ್ನು ಪಡೆದುಕೊಂಡಿದ್ದರು ಎಂದರೆ ಸುಳ್ಳು.

5. ಹೊಸ ಷರತ್ತು ಇತ್ತು, ಹಳೆ ಷರತ್ತು ಆದ ನಂತರ ಬಾಕಿ ಹಣ ಪಡೆದು ಕ್ರಯ ಪತ್ರ ಬರೆದುಕೊಡುತ್ತೇವೆ ಅಂತಾ ನಮ್ಮ ತಂದೆ ಹೇಳಿದ್ದರು ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದರು ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ, ತಾಯಿ ಹಾಗೂ ಸಹೋದರನ ಸಹಿಯನ್ನು ತೋರಿಸದೇ ಗುರುತಿಸಲು ಆಗುವುದಿಲ್ಲ. ನನಗೆ ಗುರುತಿಸಲು ಆದರೂ ಸಹ ದಾವಾ ಆಸ್ತಿಯನ್ನು ಎತ್ತಿಹಾಕಬೇಕೆಂಬ ಉದ್ದೇಶದಿಂದ ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಅಸಲು ದಾವಾ. ನಂಃ 171/2024</u>

**ಪಿಡಬ್ಲ್ಯೂ - 1 ನಿರ್ಮಲಾ ಮಾದರ**

6. ನಮ್ಮ ತಂದೆ ನನಗೆ ತುಂಬಾ ಮನೆತನದ ಸಂಬಂಧವಾಗಿ ಕಷ್ಟವಿರುತ್ತದೆ

ಎಂದು ಕೇಳಿದ್ದರಿಂದ ಸಾಕ್ಷಿದಾರರ ಸಮಕ್ಷಮ ರೂ. 15,000/- ಹಣ ಪಡೆದು ದಿಃ 10-02-2005 ರಂದು ಪುರಾ ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ವಿಷಯ ಗೊತ್ತಿದ್ದರು ಸಹ ಸುಳ್ಳು ಇರುತ್ತದೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಿಃ 24-03-2007 ರಂದು ಪುನಃ ತುಂಬಾ ಕಷ್ಟ ಇದೆ ಎಂದು ಹೇಳಿ ಸಾಕ್ಷಿದಾರರ ಸಮಕ್ಷಮ ರೂ. 22,000/- ಹಣ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಮಕ್ಷಮ ದಿಃ 17-11-2004 ರ ಕರಾರು ಪತ್ರದ ಮುಂದುವರೆದ ಭಾಗ ಎಂದು ನಮೂದಿಸಿ ಕರಾರು ಪತ್ರದಲ್ಲಿ ಬರೆದು ಸಹಿ ಮಾಡಿಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ವಿಷಯವನ್ನು ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಿಃ 31-03-2007 ರಂದು ಪುನಃ ಇನ್ನೂ ಸ್ವಲ್ಪ ಹಣ ಬೇಕು ಎಂದು ರೂ. 3000/- ಬೇಕು ಎಂದು ಒಟ್ಟು ರೂ. 90,000/- ಹಣ ಮುಟ್ಟಿರುತ್ತದೆ ಎಂದು ಸಾಕ್ಷಿದಾರರ ಸಮಕ್ಷಮ 100/- ರೂ ಬಾಂಡ್ ಪೇಪರ ಮೇಲೆ ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ವಿಷಯ ಗೊತ್ತಿದ್ದರು ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂಚಗಾರ ಪತ್ರಕ್ಕೆ, ನನ್ನ ತಂದೆ, ತಾಯಿ, ನನ್ನ ಸಹೋದರ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 23-01-2008 ರಂದು ಬಾಕಿ ರೂ. 27,000/- ಹಣ ಪಡೆದು ನನ್ನ ತಂದೆ ನೋಂದಾಯಿತ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ಕ್ರಯ ಪತ್ರಕ್ಕೆ ನನ್ನ ಸಹೋದರ ಒಪ್ಪಿಗೆ ಸಹಿಯನ್ನು ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ಖರೀದಿ ಪತ್ರ ಆದ ವಿಷಯ ನನಗೆ ಎಲ್ಲಾ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.



9. ಖರೀದಿಸಿದ ಯಮನೂರಪ್ಪ ತೀರಿಕೊಂಡ ನಂತರ ಅವರ ವಾರಸಾ ನಾತೆಯಿಂದ ಪ್ರತಿವಾದಿ ನಂಬರ 2 ರಿಂದ 5 ರವರ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ತಂದೆ ಸಾಗುವಳಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿ ನಂಬರ 2 ರಿಂದ 5 ರವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಸದರಿ ಆಸ್ತಿಯು ಗಜೇಂದ್ರಗಡದ ನಗರಕ್ಕೆ ಹತ್ತಿರ ಇದ್ದುದ್ದರಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿ ಗದಗರವರಿಂದ ಭೂಪರಿವರ್ತನೆ ಆದೇಶ ಮಾಡಿಸಿ ಪ್ಲಾಟಗಳನ್ನಾಗಿ ಅಭಿವೃದ್ದಿ ಪಡಿಸಿರುತ್ತಾರೆ ಎಂದರೆ ಸುಳ್ಳು.

10. ಸದರಿ ಆಸ್ತಿಯಲ್ಲಿ ಪ್ರತಿವಾದಿ 2 ರಿಂದ 5 ರವರು ಅಭಿವೃದ್ದಿ ಪಡಿಸುವ ಸಲುವಾಗಿ, ರಸ್ತೆ, ಚರಂಡಿ ಮತ್ತು ವಿದ್ಯುತ್ ಸಂಪರ್ಕಕ್ಕಾಗಿ ಕಂಬಗಳನ್ನು ಹಾಕಿಸುತ್ತೀರುವಾಗ ನಾವು ಹೋಗಿ ತಕರಾರು ಮಾಡಿರುತ್ತೇವೆ ಎಂದರೆ ಸರಿ. ಆಗ ನಾವು ಅವಾಶ್ಚ ಶಬ್ದಗಳಿಂದ ಬೈದಾಡಿರುತ್ತೇವೆ ಎಂದರೆ ಸುಳ್ಳು. ಸದರಿ ವಿಷಯ ಪೊಲೀಸ ಠಾಣೆಯವರೆಗೂ ಹೋಯಿತು ಎಂದರೆ ಸುಳ್ಳು. ಪೊಲೀಸರು ಸಿವಿಲ್ ವ್ಯಾಜ್ಯ ಇರುತ್ತದೆ ನ್ಯಾಯಾಲಯಕ್ಕೆ ಹೋಗಿ ಎಂದು ತಿಳಿಸಿದ್ದರಿಂದ ಪ್ರತಿವಾದಿ 2 ರಿಂದ 5 ರವರು ಪ್ರಧಾನ ಸಿವಿಲ್ ನ್ಯಾಯಾಲಯ ರೋಣದಲ್ಲಿ ಅಸಲು ದಾವಾ ನಂಬರ 163/2024 ಎಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಂತರ ಪ್ರತಿವಾದಿ 2 ರಿಂದ 5 ರವರು ಅದರಲ್ಲಿ ನ್ಯಾಯಾಲಯದಿಂದ ನಿರ್ಬಂಧಕಾಜ್ಞೆಯನ್ನು ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯ ಸಮನ್ಸಗಳು ನಮಗೆ ಮುಟ್ಟಿರುತ್ತವೆ ಎಂದರೆ ಸುಳ್ಳು. ಆ ಕೇಸಿನಲ್ಲಿ ಸಮನ್ಸ ಬಂದ ನಂತರ ಪ್ರತಿವಾದಿ 2 ರಿಂದ 5 ರವರಿಗೆ ತೊಂದರೆ ಉಂಟುಮಾಡಬೇಕೆಂದು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

11. ನ್ಯಾಯಾಲಯದಲ್ಲಿ ಆದೇಶವನ್ನು ಪಡೆದುಕೊಂಡ ನಂತರವೂ ಸಹ ನಾವು ದಾವಾ ಆಸ್ತಿಯಲ್ಲಿ ಹೋಗಿ ತಂಟೆ ತಕರಾರು ಮಾಡಿದ್ದರಿಂದ ಪ್ರತಿವಾದಿ 2 ರಿಂದ 5 ರವರು ಪೊಲೀಸರವರಿಗೆ ಹೋಗಿ ದೂರು ಕೊಟ್ಟರು ಆಗ ಪೊಲೀಸರು ಜೀಪ್ ತೆಗೆದುಕೊಂಡು ಹೋಗಿ ತಂಟೆ ತಕರಾರು ಮಾಡಬಾರದೆಂದು ತಿಳಿಸಿದ ನಂತರ ನಾವು ಅಲ್ಲಿಗೆ ಹೋಗುವುದನ್ನು ಬಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ದಾವಾ ಆಸ್ತಿಯಲ್ಲಿ ಜಮೀನು ಇರುತ್ತದೆ, ಪ್ಲಾಟು ಇರುವುದಿಲ್ಲ. ನಾನು ಹೇಳಿದಂತೆ ಯಾವುದೇ ಜಮೀನು ಇರುವುದಿಲ್ಲ ಅಲ್ಲಿ ಯಾವುದೇ ಬಿತ್ತುಬೆಳೆಯುವುದನ್ನು ಮಾಡುತ್ತಿಲ್ಲ ಅಲ್ಲಿ ಚರಂಡಿ ಮತ್ತು ರಸ್ತೆಗಳನ್ನು ಮಾಡಿ, ಅಲ್ಲಿ

ಒಂದು ಗಿಡವನ್ನು ಸಹ ಬೆಳೆಸದಂತಹ ಸ್ಥಿತಿಯಲ್ಲಿರುತ್ತದೆ ಎಂದರೆ ಸುಳ್ಳು. ದಾವಾ ಆಸ್ತಿಯು ಗಜೇಂದ್ರಗಡಕ್ಕೆ ಅತ್ಯಂತ ಸಮೀಪ ಇರುತ್ತದೆ ಎಂದರೆ ಸರಿ. ಸದರಿ ದಾವಾ ಆಸ್ತಿಯಲ್ಲಿಯ ಪ್ಲಾಟಗಳು ಒಂದು ಪ್ಲಾಟಿಗೆ ರೂ. 6-7 ಲಕ್ಷ ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಯನ್ನು ಮಾರಾಟ ಮಾಡಿದ ವಿಷಯ 2004 ರಲ್ಲಿಯೇ ಗೊತ್ತಿತ್ತು ಎಂದರೆ ಸುಳ್ಳು. ಸದರಿ ಆಸ್ತಿಯನ್ನು 2008 ರಲ್ಲಿ ನೋಂದಾಯಿತ ಕ್ರಯ ಪತ್ರದ ಮುಖಾಂತರ ಮಾಡಿಕೊಟ್ಟಿದ್ದು ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸರಿಯಾದ ನ್ಯಾಯಾಲಯದ ಶುಲ್ಕ ಭರಿಸಿಲ್ಲ ಎಂದರೆ ಸರಿಯಲ್ಲ.  ದಾವಾ ಆಸ್ತಿಯು ಅಭಿವೃದ್ಧಿಯಾಗಿ ಅದರ ಮೌಲ್ಯ ಹೆಚ್ಚಾಗಿದ್ದರಿಂದ ಅದನ್ನು ಹೇಗಾದರೂ ಎತ್ತಿ ಹಾಕಿ ಪ್ರತಿವಾದಿ 2 ರಿಂದ 5 ರವರಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

-ಸಹಿ-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.